**ದಿನಾಂಕ:02-02-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ಶ್ರೀ.ಕೆ.ಎಸ್. ವಕೀಲರಿಂದ ಎದುರುದಾರರ ಪರ:-**

ಎದುರುದಾರನು ಸೆಕ್ಯೂರಿಟಿ ಗಾರ್ಡ ಕೆಲಸ ಮಾಡುತ್ತಾನೆ. ಎದುರುದಾರನಿಗೆ ನಮ್ಮ ಮಾವ ಮೃತ ಪಟ್ಟ ನಂತರ ಅನುಕಂಪದ ಆಧಾರದ ಮೇಲೆ ಕೆಲಸ ಬಂದಿರುತ್ತದೆ ಎಂದರೆ ಸರಿ. ನಮ್ಮ ಮಾವನಿಗೆ ಇಬ್ಬರು ಹೆಣ್ಣು ಮಕ್ಕಳು & 3 ಜನ ಗಂಡು ಮಕ್ಕಳು ಇದ್ದು, ಅದರಲ್ಲಿ ಒಬ್ಬರು ಮೃತ ಪಟ್ಟಿರುತ್ತಾರೆ. ಸಾಕ್ಷಿಯು ಮುಂದುವರೆದು ಎಲ್ಲರದೂ ಮದುವೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಮೃತ್ತ ಪಟ್ಟವರಿಗೆ ಹೆಂಡತಿ ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿಯು ಮಕ್ಕಳು ಇರುವುದಿಲ್ಲ ಬೇರೆ ಮದುವೆ ಆಗಿರುತ್ತಾಳೆ ಎಂದು ನುಡಿಯುತ್ತಾರೆ. ನಮ್ಮ ಅತ್ತೆ ಪ್ರಸ್ತುತ ಜೀವಂತ ಇರುತ್ತಾರೆ. ಸಾಕ್ಷಿಯು ಮುಂದುವರೆದು ಅವರಿಗೆ ಪೆನ್ಸನ್ ಬರುತ್ತದೆ ಎಂದು ನುಡಿಯುತ್ತಾರೆ. ಎದುರುದಾರನ ಸೋದರ ಅತ್ತೆಯ ಮದುವೆ ಆಗಿರುವುದಿಲ್ಲ & ಕಣ್ಣುಗಳು ಕಾಣುವುದಿಲ್ಲ ಎಂದರೆ ಸಾಕ್ಷಿಯು ಮದುವೆ ಆಗಿರುವುದಿಲ್ಲ ಕಣ್ಣು ಕಾಣುತ್ತವೆ ಎಂದು ನುಡಿಯುತ್ತಾಳೆ. ಮುಂದುವರೆದು ಎದುರುದಾರನ ಅತ್ತಿಗೆ ಬಳೆ ಅಂಗಡಿ ಇದ್ದು ಬೇರೆ ಊರಿನಲ್ಲಿ ಇರುತ್ತಾಳೆ ಎಂದು ನುಡಿಯುತ್ತಾಳೆ. ಎದುರುದಾರನು ಎಲ್ಲಾ ಅಣ್ಣ-ತಮ್ಮಂದಿರು ಹಾಗೂ ಅವರ ತಾಯಿಯೊಂದಿಗೆ ವಾಸ ಮಾಡುತ್ತಾರೆ ಎಂದರೆ ಸರಿ. ಎದುರುದಾರನ ತಾಯಿಗೆ 80 ವರ್ಷ ವಯಸ್ಸು ಆಗಿತ್ತು ಎಂದರೆ ಸಾಕ್ಷಿಯು 50 ವರ್ಷ ವಯಸ್ಸು ಆಗಿತ್ತು ಎಂದು ನುಡಿಯುತ್ತಾರೆ. ಎದುರುದಾರನ ತಾಯಿಗೆ 50 ವರ್ಷ ವಯಸ್ಸು ಆಗಿರುತ್ತದೆ ಹಾಗೂ ಎದುರುದಾರನ ಸೋದರ ಅತ್ತೆ ಬೇರೆ ಊರಿನಲ್ಲಿ ವಾಸ ಮಾಡುತ್ತಾಳೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎದುರುದಾರನ ವೇತನ ಪ್ರಮಾಣ ಪತ್ರವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಎದುರುದಾರನು ಪ್ರತಿ ತಿಂಗಳು ರೂ.8000/-

ಹಣವನ್ನು ನಿಮಗೆ ಜೀವನಾಂಶ ನೀಡಿರುತ್ತಾನೆ ಎಂದರೆ ಸರಿ. ಎದುರುದಾರನಿಗೆ ರೂ.20,000/- ಸಂಬಳ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ರೂ.30,000/- ಇರುತ್ತದೆ ಎಂದು ನುಡಿಯುತ್ತಾರೆ. ಎದುರುದಾರನಿಗೆ ರೂ.20,000/- ಸಂಬಳ ಇದ್ದು ಪ್ರತಿತಿಂಗಳು ಈಗಾಗಲೇ ನಿಮಗೆ ರೂ.8,000/- ಜೀವನಾಂಶ ನೀಡುತ್ತಿದ್ದು ಉಳಿದ ಹಣದಲ್ಲಿ ತನ್ನನ್ನು ಹಾಗೂ ತನ್ನ ತಾಯಿಯನ್ನು ಹಾಗೂ ಅವರ ಕುಟುಂಬವನ್ನು ನೋಡಿಕೊಳ್ಳಬೇಕೆಂದರೆ ಸರಿಯಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ಕಾಡವಾದ ಗ್ರಾಮದಲ್ಲಿ ಎದುರುದಾರರಿಗೆ ಒಂದು ಅಂಗಡಿ ಇರುತ್ತದೆ ಹಾಗೂ ಅದರಿಂದ ಬಾಡಿಗೆ ಬರುತ್ತದೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ ಎದುರುದಾರನು ಈಗಾಗಲೇ ನಿಮಗೆ ಪ್ರತಿ ತಿಂಗಳು ರೂ.8,000/- ನೀಡುತ್ತಿದ್ದು ಹೆಚ್ಚಿಗೆ ಜೀವನಾಂಶ ನೀಡಲು ಶಕ್ತನಿಲ್ಲ ಎಂದರೆ ಸರಿಯಲ್ಲ. ನಾನು ಬಿ.ಎ. & ಡಿಎಡ್ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರಸ್ತುತ ಬಿ.ಎಡ್ ವಿದ್ಯಾಭ್ಯಾಸ ಮಾಡುತ್ತಿರುತ್ತೇನೆ. ಎದುರುದಾನು 10 ನೇ ತರಗತಿ ಅಥವಾ 12 ತರಗತಿ ವಿದ್ಯಾಭ್ಯಾಸ ಮಾಡಿರುತ್ತಾನೆ. ನೀನು ವಿದ್ಯಾವಂತಳು ಆಗಿದ್ದರಿಂದ ದುಡಿಯಲು ಶಕ್ತರಿರುತ್ತಿ ಎಂದರೆ ಸರಿಯಲ್ಲ. ಇಲ್ಲಿಯವರೆಗೆ ನೀವು ನಿಮ್ಮ ತಂದೆತಾಯಿ ಮನೆಯಲ್ಲಿ ವಾಸವಿರುತ್ತೇನೆ ಎಂದರೆ ಸರಿಯಲ್ಲ. ಬಸೀರ ಅಹಮ್ಮದ ಮನೆಯಲ್ಲಿ ಬಾಡಿಗೆ ಇರುತ್ತೇನೆ. ಪ್ರತಿ ತಿಂಗಳು ಬಾಡಿಗೆ ರೂ.2,500/- ಕಟ್ಟುತ್ತೇನೆ. ಎದುರುದಾರನು ಕರೆದುಕೊಂಡು ಹೋಗಿ ನನ್ನನ್ನು ಸರಿಯಾಗಿ ನೋಡಿಕೊಂಡರೆ ನಾನು ಹೋಗಲು ತಯಾರು ಇರುತ್ತೇನೆ.

**(ಮರು ವಿಚಾರಣೆ ಇರುವುದಿಲ್ಲ)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**(ಓ.ಹೇ.ಕೇ.ಸ.ಇದೆ)** **ಜೆ.ಎಂ.ಎಫ್.ಸಿ. ನ್ಯಾಯಾಧೀಶರು**
**ಹುಮನಾಬಾದ.**

**ಸಾಕ್ಷಿದಾರರ ಸಹಿ:-**